ಬಿ.ಪಿ. ವೆಂಕಟೇಶ್, ಹೊಸಕೋಟೆ
*ದಮ್‌ಗೂ, ರಮ್‌ಗೂ ಇರುವ ವ್ಯತ್ಯಾಸವೇನು?*



ದಮ್ ಹಿಡಿಯುವುದು ಕಷ್ಟ, ರಮ್ ಬಿಡುವುದು ಕಷ್ಟ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ತಂತ್ರಜ್ಞಾನವಿದ್ದರೂ ಶೋಷಣೆ ನಿಂತಿಲ್ಲವಲ್ಲಾ...?*
ಫ್ಯೂಚರ್ ಕಂಪ್ಯೂಟರ್ ನೋಡ್ರಿಂದ್ರೆ ಕಂಪ್ಯೂಟರಲ್ಲಿ ಫ್ಯೂಚರ್ ನೋಡೋವ್ರಿಗೂ ಶೋಷಣೆ ತಪ್ಪಿದ್ದಲ್ಲ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ವಯಸ್ಸಾದ ಹೆಂಗಸರು ರೂಪವನ್ನು ಕಾಪಾಡಿಕೊಳ್ಳುವುದರ ಗುಟ್ಟೇನು?*
ಚಿಂತೆಯನ್ನು ಗಂಡನಿಗೋ, ಸೊಸೆಗೋ ಟ್ರಾನ್ಸ್‌ಫರ್ ಮಾಡಿ ನೆಮ್ಮದಿ ಕಾಪಾಡಿಕೊಳ್ಳುವುದೇ.

ವಿ. ಹೇಮಂತಕುಮಾರ್, ಬೆಂಗಳೂರು
*ಗುರುಗಳು ಶಿಷ್ಯರಿಗೆ ಹೇಳಿಕೊಡಲು ಹೆದರುವಂತಹ ವಿದ್ಯೆ ಯಾವುದು?*




ಭಾಷಣ; ಗುರುಗಳನ್ನೇ ಅಧ್ಯಕ್ಷರಾಗಿ ಕೂಡಿಸಿ ಗಂಟೆಗಟ್ಟಲೆ ಕೊರೆಯುವರಲ್ಲ.

ಬಸವನಗೌಡ, ಹೆಬ್ಬಳಗೆರೆ
*ಪ್ರಗತಿಪರ ಚಿಂತಕ ಎನಿಸಿಕೊಳ್ಳಲು ಏನು ಮಾಡಬೇಕು ಸಾರ್?*
ಪ್ರಗತಿ ಎನ್ನುವ ಹುಡುಗಿಯನ್ನು ಲವ್ ಮಾಡಿದರೆ ಸಾಕು.

ರತ್ನಜ, ಮೈಸೂರು
*ಭಾರತ ಕಾಮಪಿಶಾಚಿಗಳ ತವರೂರಾಗಲು ವಾತ್ಸ್ಯಾಯನ ಮುನಿಯೇ ಕಾರಣವೇ?*
ಮುನಿಯಲ್ಲ; ಮನಿ, ಮಿನಿ, ಕಾಮಿನಿ, ದುರ್ವ್ಯಸನಿ.

ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್.
*ಪುರುಷರಿಗೆ ಮಾತ್ರ ಇರುವ ಮಲ್ಲಯುದ್ಧ ಸ್ತ್ರೀಯರಿಗೆ ಏಕಿಲ್ಲ?*
ಮುಂದಿನ ಸೀಟುಗಳಿಗಾಗಿ ಅಖಾಡಾದಲ್ಲಿ ಆಗುವುದಕ್ಕಿಂತ ಪ್ರೇಕ್ಷಕರಲ್ಲೇ ಹೆಚ್ಚು ಕುಸ್ತಿ ಆಗುವುದರಿಂದ.

ನಾಗವೇಣಿ ಸೋಮಶೇಖರ್, ಮೈಸೂರು
*ನಮ್ಮ ಭಾರತ ಸಿಂಗಪುರ್ ಆಗುವುದು ಯಾವಾಗ?*
ಹತ್ತು ವರ್ಷ ಆಗಿತ್ತಲ್ಲ – ಮನಮೋಹನ್–ಸಿಂಗಪುರ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ವಯಸ್ಸಾದಂತೆ ಮನುಷ್ಯನಿಗೆ ಮರೆವು ಹೆಚ್ಚುವುದೇಕೆ?*
ವಯಸ್ಸಾದದ್ದು ನೆನಪಿಗೆ ಬಂದು ನೋವಾಗದಿರಲೆಂದು.

ಎಸ್.ಎಲ್. ಸತ್ಯಮೂರ್ತಿ, ಶಿವಮೊಗ್ಗ
*ದೇವರಿಗೂ, ಸ್ವಯಂಘೋಷಿತ ದೇವಮಾನವರಿಗೂ ಇರುವ ವ್ಯತ್ಯಾಸವೇನು?*
ದೇವ ಶುಭ್ರ, ಆರೋಗ್ಯಕರ ಶ್ಯಾವಿಗೆ. ದೇವಮಾನವ ಮ್ಯಾಗಿ.

ಎಚ್.ಜಿ. ಜಗದೀಶ್, ಮೈಸೂರು
*ನ್ಯಾಯಾಲಯದಲ್ಲಿ ಕಕ್ಷಿದಾರರ ಸಂಖ್ಯೆಗಿಂತ ವಕೀಲರ ಸಂಖ್ಯೆಯೇ ಹೆಚ್ಚಾಗಿದೆಯಲ್ಲ?*
ಬಂದ ಕಕ್ಷಿದಾರರೆಲ್ಲ ಜೈಲಿಗೆ ಹೋಗುವಂತೆ ದಡ್ಡವಾದ ಮಾಡಿದುದರ ಫಲವಂತೆ.

ಮಹಾವೀರ ಕಾಸರ, ಶಿವಮೊಗ್ಗ
*ಕೈ ಕೆಸರಾದರೆ ಬಾಯಿ ಮೊಸರು. ಬಾಯಿ ಕೆಸರಾದರೆ?*
ಕುಡಿದು ತೂರಾಡಿಕೊಂಡುಹೋಗಿ ಕೊಚ್ಚೆಗುಂಡೀಲಿ ಬಿದ್ದಿದಾರೇಂತ ಅರ್ಥ.

ಓಂ ಚನ್ನೇಶ್, ಭದ್ರಾವತಿ
*ತಾಳಿ ಕಟ್ಟುವಾಗ ಗಟ್ಟಿ ಮೇಳ ಯಾಕೆ ಹೊಡೀತಾರೆ?*
ಬಿದ್ದ ಪೆಕರ. ಇನ್ಮುಂದೆ ಇಷ್ಟೇ ಜೋರಾಗಿ ಬಡ್ಕೊಳೋದೇ ಅವನ ಹಣೆಬರಹ ಅಂತ ಸೂಚಿಸಕ್ಕೆ!

## ಬಹುಮಾನಿತ ಪ್ರಶ್ನೆ

ಬಿ.ಆರ್. ಕುಲಕರ್ಣಿ, ಹುಬ್ಬಳ್ಳಿ
*ಎಲ್ಲೆಡೆಯೂ ಎಲ್ಲಕ್ಕೂ ಸಾಲ ಕೊಡುವ ಈ ದಿನಗಳಲ್ಲಿ 'ಸಾಲವನು ಕೊಂಬಾಗ...' ಎಂದ ಸರ್ವಜ್ಞ ಏನೆನ್ನುತ್ತಿದ್ದ?*
ಸಾಲವನು ಕೊಂಬಾಗ ಹಾಲೋಗರುಂಡಂತೆ; ಸಾಲ ಮನ್ನಾ ಮಾಡಿದಾಗ ಹಾಲಿನ ಡೈರಿಯೇ ಕೊಂಡಂತೆ ಸರ್ವಜ್ಞ!

ಕುಮಾರ ಚಲವಾದಿ, ಹೊಳೆನರಸಿಪುರ
*ಸತ್ತ ಮೇಲೆ ಇಷ್ಟು ಲಕ್ಷ ಸಿಗುತ್ತದೆಂದು ಇಂಷೂರೆನ್ಸ್‌ನವರು ಹೇಳುತ್ತಾರಲ್ಲ, ಇದರಿಂದ ಸತ್ತವರಿಗೇನು ಪ್ರಯೋಜನ?*
ಇವನು ಸತ್ರೂ ಮೂರ್ಕಾಸ್ ಪ್ರಯೋಜನವಿಲ್ಲ ಎನ್ನಿಸಿಕೊಳ್ಳುವುದು ತಪ್ಪುತ್ತದಲ್ಲ!

ವಿ. ಹಮೀದ್, ವಿಟ್ಲ
*ಮಳೆಗಾಲದಲ್ಲಿ ಹುಡುಗಿ ಸ್ಲೀವ್‌ಲೆಸ್ ಬ್ಲೌಸ್ ಧರಿಸುವುದರ ಗುಟ್ಟೇನು?*
ಕೊಚ್ಚೆ ಹಾರಿದರೆ ಬಟ್ಟೆ ಒರೆಸಕ್ಕಿಂತ ಚರ್ಮ ಒರೆಸೋದು ಸುಲಭಾಂತ.

ವೈ.ಜಿ. ನರಸಿಂಹನ್, ಶಿವಮೊಗ್ಗ
*ಜೀವನವೆಂದರೆ ನಾವು ಹಂತಹಂತವಾಗಿ ಹತ್ತಿ ಹೋಗುವ ಮೆಟ್ಟಲು ಅಂತಾರಲ್ಲ?*



ಅದು ಸತ್ತು ಮೇಲಕ್ಕೆ ಹೋಗುವವರ ಬಾಬ್ತು, ಹೂಳಿಸಿಕೊಳ್ಳುವವರದು ಹಂತಹಂತವಾಗಿ ಇಳಿಯುವ ಮೆಟ್ಟಿಲು.

ನವಿರವಿ, ಬಾಳೆಹೊನ್ನೂರು
*ಪ್ರತಿ ವಾರ ಸುಧಾದಲ್ಲಿ ನನ್ನ ಪ್ರಶ್ನೆ ಪ್ರಕಟಿಸಲು ಏನು ತೊಗೊಳ್ತೀರಾ?*
ಜಾಹೀರಾತಿನ ರೂಪದಲ್ಲಿ ಕೊಡಿ; ಪ್ರತಿ ಪೇಜಿನಲ್ಲೂ ಪ್ರಕಟಿಸುತ್ತೇವೆ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಕಪಟ ರಾಜಕೀಯದಿಂದ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳು ಇನ್ನುಮುಂದೆ ಬದುಕುಳಿಯಲು ಸಾಧ್ಯವೆ?*
ಸಾಧ್ಯ! ಇಳುವರಿ ಇಲ್ಲದ ಇಲಾಖೆಯಲ್ಲಿ ಇರಬಹುದು.

■ ರಾಮ್